Founded 1917 SATYAVADI Oldest Newspaper of Mysore Daily & Weekly Reg No. M 1299

ಸತ್ಯವಾದಿ

ಸಂಪುಟ 26 ಸಂಚಿಕೆ 245] ಶನಿವಾರ 17—4—1943 [6 ಪೈ

ನಾಜಿ ಸೈನ್ಯ ಬಲೆಗೆ ಬೀಳುವುದೇ?

ವಾಷಿಂಗ್ಟನ್ ಏ 15—ಟ್ಯುನಿಷಿಯಾದ ಹೊಡೆದಾಟ ಕೊನೆಗೆ ಒಂದಿರುವುದೆಂದೂ, 2 ಲಕ್ಷ ಆಕ್ಸಿಸ್ ಸೈನ್ಯವು ಜಲೆಗೆ ಬೀಳಬಹುದೆಂದೂ, ಅಮೇರಿಕಾದ ಯುದ್ಧ ಕಾರ್ಯದರ್ಶಿಗಳು ಹೇಳಿರುತ್ತಾರೆ.

ಸೂರತ್ ಏ 15— ಜಾರ್ಜ್‌ಶಿಯ ಸ್ವರಾಜ್ಯ ಆಶ್ರಮದಲ್ಲಿ ದೊರೆಯುವ ಅಸ್ತಿಯನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಲಾಗುವುದೆಂದೂ ಸಾರ್ವಜನಿಕರ್ಯಾರಾದರೂ ಹಕ್ಕು ಇವುಗಳ ಮೇಲಿದ್ದರೆ ಕೂಡಲೇ ತಿಳಿಸಬೇಕೆಂದೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಪ್ರಕಟಿಸಿರುತ್ತಾರೆ.

ಲಂಡನ್ ಏ 15—ಅಮೆರಿಕದವರು ಡಾನ್ಸಿಗ್ ವಲ್ಲು ಕೊಯಸಿಗ್ನ್‌ಬರ್ಗ್ ಮೇಲೆ ಧಾಳಿ ನಡೆಸಿ ಅಲ್ಲಿಯ ಎಣ್ಣೆಯ ಗತ್ತುಗುಗಳ ಹತ್ತಿರ ಭಾರಿ ಅಗ್ನಿತ್ಯುತ್ಪಾದಕ ಮಾಡಿದರು.

ಜೂರಿಚ್ ಏ 15—ರಿಚ್‌ಸ್ಟ್ಯಾಗಿನ ಸ್ಪೆಷಲ್ ಮೀಟಿಂಗು ನಡೆಸಲ್ಪಟ್ಟು ಹಿಟ್ಲರ್ ಭಾಷಣವಾಗುವುದೆಂದೂ ಇದು ಪ್ರಾಯಶಃ ಮಂಗಳವಾರ ನಡೆಯಬಹುದೆಂದೂ ಬರ್ಲಿನ್ ವರದಿ

ಉತ್ಕೃಷ್ಟವಾದ ಹಿಂಗು

ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

ಊಟವು ರುಚಿಕರವಾಗಿದ್ದು, ಸಂಪೂರ್ಣ ಆರೋಗ್ಯವೂ, ಸೌಖ್ಯವೂ ದೊರೆಯಲು

T G. ಮಾರ್ಕಿನ ಹಿಂಗನ್ನು ಉಪಯೋಗಿಸಿ.

ಇದನ್ನು ನೀವು ಒಂದು ಸಾರಿ ಉಪಯೋಗಿಸಿದರೆ, ಸಂತರ ಬೇರೆ ಯಾವುದನ್ನೂ ಉಪಯೋಗಿಸುವುದಿಲ್ಲ.

ಒಂದು, ಅರ್ಧ, ಕಾಲು ಪೌಂಡಿನ, ಒಂದು ಸೇರು, ಒಂದು ಪಲಮ್ ಪ್ಯಾಕಿನಲ್ಲಿ ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲೂ ದೊರೆಯುತ್ತದೆ.

ನಮ್ಮ ಫರಿಮಳ ಅಡಿಕೆಪುಡಿಯು ಸುಪ್ರಸಿದ್ಧವಾದುದು.

ವಲ್ಲಭದಾಸ್ ತೇಜ್‌ಪಾಲ್

೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಮದರಾಸು.

ಅಪೇರಾ ಸಿನೆ ಅಮೋಘ ಭಾರ

ಮನೋಮೋಹಿನಿ

ಪಿ.ಯು. ಚಿನ್ನಪ್ಪ, ಟಿ.ಆರ್. ರಾಜಕುಮಾರಿ, ಶ್ಯಾಮು, ಮಹಾಲಿಂಗಂ, ಕೆ.ಕೆ. ಪೆರುಮಾಳ್, ಎನ್. ಎಸ್. ಕೃಷ್ಣಬಾಬು, ಮಧುರಾ, ಕಾಳಿ ಎನ್. ರತ್ನಂ, ಮುಂತಾದವರು ನಾಕ್ರ ನಹಸಿರುವ

ಮನಮೋಹನ ಸಾಂಘಿಕ ಚಿತ್ರ

ಮದುವೆಯ ಶಾಸ್ತ್ರ ! ಎಲ್ಲೆಲ್ಲಿ ಹೇಗೆಹೇಗೆ ನಡೆಯುತ್ತೆ.

ಮದುವೆಯು ಒಂದೊಂದು ದೇಶದಲ್ಲಿ ಒಂದೊಂದು ತರಹ ನಡೆಯುತ್ತೆ. ಹಣವನ್ನು ಕೊಟ್ಟು ಹೆಂಡತಿಯನ್ನು ಕೊಂಡರೆ ಮದುವೆಯು ಮುಗಿದಂತೆಯೆ ? ಇದು ಕಾಡು ಜನರಲ್ಲೇ ಆಗಲಿ ಶ್ರೀಮಂತಲ್ಲೇ ಆಗಲಿ ನಡೆಯುವುದು. ಪೂರ್ವದಲ್ಲಿ ರೋಂ ಜನಡಲ್ಲಿ ಮದುವಣಗಿತ್ತಿಯು ತಗಂಡನ ಮನೆಗೆ ಬಂದಾಗ ತನ್ನ ಸಂಗಡ ಒಬ್ಬ ಗುಲಾಮಗಿತ್ತಿಯನ್ನೂ ಚರಕವನ್ನೂ ತರುತ್ತಿದ್ದಳು. ಈ ಚಂಕದಿಂದ ತನ್ನ ಗಂಡನ ಮನೆಯವರು ಒಟ್ಟಿಯನ್ನು ನೆಯ್ದು ಕೊಡಬೇಕೆಂಬುದೇ ಉದ್ದೇಶ. ಕೆಲವು ಕಾಡು ಜನರು ಮದುವಣಗಿತ್ತಿಯು ಚಿಕ್ಕ—ಮನೆಯಲ್ಲಿ ಒಂದು ಹಗ್ಗ, ಒಂದು ಅಡಿಗೆ ಮಾಡುವ ಪಾತ್ರೆ ಒಂದು ಕಟ್ಟಿಗೆ ಹೊರೆ ಇವನ್ನ ಇಡುವರು. ಇದರಿಂದ ಮದುವಣಗಿತ್ತಿಯು ತಾನು ಎಂಥ ಹೊರೆಯನ್ನು ಹೊರಬಲ್ಲಳೆಂದೂ, ಅಡಿಗೆ ಮಾಡುವಳೆಂದೂ ಸೌದೆಯನ್ನು ತರುವಳೆಂಬ ಸಂಬಿಕೆ. ಮದನಣಗಿತ್ತಿಯು ಸೌದೆಯನ್ನು ಕೊಡಿಲಿಯಿಂದ ಕತ್ತರಿಸಿ ಕಂತೆಕಟ್ಟಿ ಮದನಣಿಗನ ಮನೆಯ ಬಾಗಿಲಿನಲ್ಲಿ ಇಡುವಳು. ಆಗ ಗಂಡನು " ನಿನ್ನ ಕೆಲಸವಾಯಿತು ವಿಶ್ರಾಂತಿ ತೆಗೆಮಕೋ " ? ಎನ್ನುವನು. ಆಫ್ರಿಕಾದ ಸಿರಿಯಲೋಯಲ್ಲಿ ಅನಾಥಾಲಯದಲ್ಲಿ ಒಂದು ವರ್ಗ ಯುವತಿಯರನ್ನೆಲ್ಲಾ ಒಬ್ಬ ಮುದುಕನ ಆಡಳಿತದಲ್ಲಿ ವಿದ್ಯಾಭ್ಯಾಸಕಲಿಸುವರು. ಒಂದು ವರ್ಷವಾದಸಂತರ ಯುವತಿಯರನ್ನೆಲ್ಲಾ ಒಟ್ಟುಗೂಡಿಸುವರು ಬೇಕಾದವರು ತಮಗೆ ಬೇಕಾದ ಯುವತಿಯನ್ನು ಆರಿಸಿಕೊಳ್ಳುವರು. ಕೇಳಿದಷ್ಟು ಹಣಸುರಿದು ಮದುಯಾಗುವರು. ಜಾವಾ ದ್ವೀಪದಲ್ಲಿ ಗಂಡನ ಕಾಲು ತೊಳೆದರೆ ಮದುವೆಯಾದಂತಾಯಿತು. ರಷ್ಯಾದಲ್ಲಿ ಮದವಣಗಿತ್ತಿಯು ಒಂದು ಕಂತೆ ಕೋಲನ್ನು ಗಂಡರಗೆ ಕೊಡುವಳು. ತಾನು ಕಟ್ಟಿ ಚಾಳಿ ಮಾಡಿದರೆ ತನ್ನನ್ನು ಇದರಿಂದ ಗಂಡನು ಹೊಡೆಯುವೆಂದೂ ಅಲ್ಲದೆ ಗಂಡನ ಜೋಡನ್ನು ತೆಗೆದುಹಾಕುವಳು. ನೀರಿನಲ್ಲಿ ಗಂಡನಿಗೆ ಜೋಡನ್ನು ಹಾಕಿದರೆ ಮದುವೆಯಾದಂತಾಯಿತು.

ಭಂಗಾರ ಬೆಳ್ಳಿ ಧಾರಣೆ

ಸವರ್	ರೂ.	57-4-0
ಬಂಗಾರ ತೊಲ	ರೂ.	79-12
ಬೆಳ್ಳಿ	,,	1-3-

ಎಲ್ಲೆಲ್ಲಿ ಏನೇನು ?

ಮಾಸ್ಕೋ ಏ 15—ರಷ್ಯನರು ಸೊವೊರೊಸಿಸ್ಕ್ ಹತ್ತಿರ ಓಡಿಸುತ್ತಿರುವರು. ಜರ್ಮನರು ಹಿಮ್ಮೆಟ್ಟುತ್ತಿರುವರು. ಕಪ್ಪು ಕಡಲಿನ ದೇವು ಪಾಳಾಗಿಬಿಟ್ಟಿದೆ.

ಲಂಡನ್ 14—ಟ್ಯುನಿಷಿಯಾದಲ್ಲಿ ವಿಮಾನಮಂಡಲಿಯವರು ಮುಂದವರಿಯುತ್ತಿರುವರು. ರೋಮೆಲ್ಲನು ಪ್ರಾಯಶಃ ಎದುರಿಸಿ ನಿಲ್ಲಬಹುದೆಂದು ಊಹಿಸಲಾಗಿದೆ.

ಬೊರೆಬಾಯಿ ಏ 15 ಹಿಂದೂದೇಶದ ಸೈಗಗಳಲ್ಲಿ ಒಂದೆರಡು ಜರ್ಮನ್ ಸೈನ್ಯವೇ ಬಂದು ಹೋಗಬಹುದೆಂದು ವೈಸ್ ಅಡ್ಮಿರಲ್ ಹೇಳಿಕೆಯಾಗಿದೆ.

ಲಂಡನ್ನಲ್ಲಿರುವ ವಿದ್ಯಾರ್ಥಿಗಳು ಮಾಂಚೆಸ್ಟರ್ ಗಾರ್ಡಿಯನ್ ಎಡಿಟರನ್ನು ಇಂಡಿಯಾಕ್ಕೆ ಹೋಗಿ ಕಣ್ಣಾರೆ ಅಲ್ಲಿನ ಪರಿಸ್ಥಿತಿಯನ್ನು ತಿಳಿಯಿರಿ ಎಂದು ಕೇಳಿದ್ದಕ್ಕೆ ಅಲ್ಲಿಗೆ ಹೋಗುವುದಕ್ಕಾಗುವುದಿಲ್ಲವೆಂದು ತಿಳಿಸಿರುತ್ತಾರೆ.

ಹಿಂದೆ ಈಜಿಪ್ತಿನಲ್ಲಿ ಬ್ರಿಟಿಷರು ಓಡುತ್ತಿದ್ದಾಗ ಅಮೆರಿಕಾದಿಂದ ರಷ್ಯಾಕ್ಕಾಗಿ 40 ವಿಮಾನಗಳು ಪರ್ಷಿಯಾಕ್ಕೆ ಬಂದಿದ್ದವು. ಅಲ್ಲಿಂದ ರಷ್ಯಾಕ್ಕೆ ಹೋಗಬೇಕಾಗಿತ್ತು. ಆ ಕಾಲದಲ್ಲಿ ರಷ್ಯನರು ತಮ್ಮ ಕಷ್ಟವನ್ನು ಯೋಚಿಸದೆ ಆಂಗ್ಲೇಯರಿಗೆ ಕೊಡಿಸಿದರು. ಈಗ ಆಂಗ್ಲೇಯರು ಆದೇ ತರಹ 50 ವಿಮಾನಗಳನ್ನು ರಷ್ಯಾಕ್ಕೆ ಕಳಿಸಿರುತ್ತಾರೆ

ಮುಂಬಯಿ ಪ್ರಾಂತ್ಯದಿಂದ ಹೊರಗಡೆ ಟೀಯನ್ನು ರವಾನಿಸಕೂಡದೆಂದು ಮುಂಬಯಿ ಸರ್ಕಾರವು ಆಜ್ಞೆ ಮಾಡಿರುತ್ತಾರೆ.

ಇಟಲಿಯಲ್ಲಿ 14 ವರ್ಷದ ಕೆಳಗಿರುವವರೆಲ್ಲರೂ ಕಾರ್ಖಾನೆಗಳಲ್ಲಿ ಕೆಲಸ ಮಾಡಬೇಕೆಂಬ ಸುಗ್ರೀವಾಜ್ಞೆಯಾಗಿದೆ.

ಶಕ್ತಿ ಸಾಧನೆಗೆ ಸುಲಭೋಪಾಯವು

ಶಕ್ತಿ ಸುಧಾ

ಸೇವನೆ ಎಂಬುವುದು ನಿಮ್ಮ ಜ್ಞಾಪಕದಲ್ಲಿರಲಿ

ಅಹಂಬ್ರಹ್ಮ

ಬರೆದವನು— "ನಾನು"

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

೯. ನನ್ನ ಭ್ರಾಂತಿ !

ಆಸೆ-ಚಿಂತೆಗಳ ಮೂಲವೇ ಭ್ರಾಂತಿ ! ಅಷ್ಟೇಕೆ ? ನನ್ನ ಪ್ರಾಪಂಚಿಕ ವ್ಯವಹಾರಗಳೆಲ್ಲವೂ ಮೂಲವೇ ಭ್ರಾಂತಿ ಎಂದು ಹೇಳಬಹುದು.

ನನಗೆ ತಂದೆತಾಯಿಗಳು, ಅಣ್ಣತಮ್ಮಂದಿರು, ಅಕ್ಕತಂಗಿಯರು, ಹೆಂಡತಿ ಮಕ್ಕಳು, ಬಂಧುಮಿತ್ರರು, ಪರಿಚಾರಕರೇ ಮೊದಲಾದ ಪರಿವಾರಕ್ಕೆ ಕೊರತೆಯೇ ಇಲ್ಲ ! ಮನೆ, ಮಠ, ಭೂಮಿ, ಐಶ್ವರ್ಯ, ಆಭರಣ, ವಸ್ತ್ರಾಭರಣಾದಿಯಾದ ಸಮಸ್ತ ಸುಖಸಾಧನೆಗಳೂ ತುಂಬಿತುಳುಕಾಡುತ್ತಿರುವುವು !

ಆದರೇನು ! ಈ ಪರಿವಾರವೆಲ್ಲವೂ ನಾನು ಜೀವಿಸಿರುವವರೆಗೆ ಮಾತ್ರ ; ಈ ಸಂಪತ್ತೆಲ್ಲವೂ ನಾನು ವಿಪತ್ತಿನಿಂದ ದೂರನಾಗಿರುವವರೆಗೆ ಮಾತ್ರ !

ನನ್ನಲ್ಲಿ ಐಶ್ವರ್ಯವಿರುವವರೆಗೂ ಈ ಪರಿವಾರ ವರ್ಗವು ನನ್ನನ್ನು ಅನುಸರಿಸುತ್ತಿರುವುದು ; ನಾನು ಜೀವಿಸಿರುವವರೆಗೂ ಈ ಸಂಪತ್ತು ನನ್ನದೆನಿಸುವುದು.

ನನ್ನಲ್ಲಿ ಎಷ್ಟು ಐಶ್ವರ್ಯವಿದ್ದರೇನು ? ಎಷ್ಟು ಪರಿವಾರವಿದ್ದರೇನು ? ನನ್ನ ಮಡದಿ ಮಕ್ಕಳು, ಇಲ್ಲನೇ ಅಣ್ಣತಮ್ಮಂದಿರು, ನಾನು ಮೃತನಾದನಂತರ ತಮಗೆ ದೊರಕಬಹುದಾದ ಭಾಗಪೆಷ್ಟೆಂಬುದನ್ನು ಲೆಕ್ಕ ಹಾಕುತ್ತಾ, ನನ್ನ ಹೊರಡುವಿಕೆಯನ್ನೇ ಎದುರುನೋಡುತ್ತಿರುವರೇ ವಿನಾ, ನಿಜವಾಗಿಯೂ ನನ್ನ ಹಿತ ಚಿಂತನೆಯನ್ನು ಮಾಡತಕ್ಕವರಾರನ್ನಾಗಲೀ, ಇದುವರೆಗೆ ನಾನೊಬ್ಬರನ್ನೂ ನೋಡಲಿಲ್ಲ.

ನಾನು ಹೋಗುವಾಗ ಒಬ್ಬನೇ ಹೋಗಬೇಕು, ಇದು ನನಗೆ ಸ್ಪಷ್ಟವಾಗಿ ಸಿದ್ಧವಾಗಿರುವುದು. ಆದರೂ, ಈ ಐಶ್ವರ್ಯ, ಈ ಪರಿವಾರಗಳಿಂದಲೇ ಸುಖವಾಗಿ ಬಡುಕುವೆನೆಂಬ ಭ್ರಾಂತಿಯು ನನ್ನನ್ನು ಬಿಟ್ಟುಹೋಗಲೊಲ್ಲದು !

ಎಂತಹ ಉಪ್ಪರಿಗೆಯ ಮನೆಯನ್ನು ಕಟ್ಟಿದರೇನು ? ಎಷ್ಟು ಐಶ್ವರ್ಯವನ್ನು ಗಳಿಸಿದರೇನು ? ಎಷ್ಟು ಸುಖಪಟ್ಟರೇನು ? ಎಷ್ಟು ಮೆರೆದರೇನು 7 ಎಂದಾದರೊಂದು ದಿನ ಈ 'ನಾನು' ಮಣ್ಣಿನ ಪಾಲೋ, ಇಲ್ಲನೇ ಬೆಂಕಿಯ ಪಾಲೋ ಆಗಲೇ ಬೇಕಷ್ಟೇ !

ಲೆಕ್ಕವಿಲ್ಲದಷ್ಟು ಉಪ್ಪರಿಗೆಗಳು ಪಾಳುಬಿದ್ದಿರುವುದನ್ನೂ, ಈಗಲೂ ಪಾಳು ಬೀಳುತ್ತಲೇ ಇರುವುದನ್ನೂ. ನೋಡಿಯೂ, ನಾನು ಒಂದು ಉಪ್ಪರಿಗೆಯನ್ನು ಕಟ್ಟಿ ವಾಸಮಾಡಬೇಕೆಂಬ ಭ್ರಾಂತಿಯು ಮಾತ್ರ ದೂರವಾಗಲಿಲ್ಲ !

ಎಷ್ಟು ದೊಡ್ಡ ಪದವಿಯನ್ನು ಪಡೆದರೇನು ? ಎಲ್ಲವನ್ನೂ ಬಿಟ್ಟು ಒಂದು ದಿನ ಹೊರಡಲೇಬೇಕಲ್ಲವೇ ? ಎಂತೆಂತಹ ಅಸಂಖ್ಯಾತ ಪದವೀಧರರು ಪದಚ್ಯುತರಾಗಿ ಪರಿತಪಿಸುತ್ತಿರುವುದನ್ನು ಪ್ರತಿನಿತ್ಯವೂ ನೋಡುತ್ತಲೇ ಇರುವೆನಾದರೂ, ನಾನೂ ಒಂದು ದೊಡ್ಡ ಪದವಿಯನ್ನು ಪಡೆಯಲೇಬೇಕೆಂಬ ಭ್ರಾಂತಿಯನ್ನು ಮಾತ್ರ ಬಿಡಲಾರದವನಾಗಿರುವೆನು !

ಅಮರ್ತಿಯೂ ಪ್ರಾಣಿಕೋಟಿಯು ನಾಯುತ್ತಲೇ ಇರುವುದು. 'ನಾನು' ಎಂದು ಹೇಳಿಕೊಳ್ಳುವ ಈ ಶರೀರವು ಸಹ ಎಂದಾದರೂ ಒಂದು ದಿನ ನಾಶವಾಗಲೇ ಬೇಕು ; ನಾಶವಾಗಿಯೇ ಆಗುವುದು ! ಇದು ನನಗೆ ಪ್ರತ್ಯಕ್ಷ ಪ್ರಮಾಣವಾಗಿದ್ದರೂ 'ನಾನು ಬದುಕಬೇಕು' 'ನಾನು ಬದುಕುವೆನು' ಎಂಬ ಭ್ರಾಂತಿಯು ಮಾತ್ರ ಹೋಗಲೊಲ್ಲದು. [ಮುಂದುವರಿಯುವುದ

ಹಾಲು ಪಾನೀಯಗಳು ನಮ್ಮಲ್ಲಿ ಒಂದು ವಿಶೇಷವೇ ಸರಿ
ಕೆನೆ, ಬೆಣ್ಣೆ, ಮಧುರವಾದ ಕ್ರೀಮುಗಳಿಗೆ ಕಳಗಿನ ಅಡ್ರೆಸ್ಸಿಗೆ ಫೋನ್‌ಮಾಡಿ
ಸುಬ್ರಹ್ಮಣ್ಯ ಡೈರಿ ಟೆಲಿಫೋನ್ ನಂಬರು 402
ಹಳೇ ಪೋಸ್ಟಾಫೀಸ್‌ರಸ್ತೆ, ಮೈಸೂರು

ಈ ವಾರದ ಭವಿಷ್ಯ

ಕೃಷ್ಣಾಪುರದ ವೆಂಕಟನರಸಿಂಹಾಚಾರ್
ಶ್ರೀ ರಾಮಕೃಷ್ಣ ಜ್ಯೋತಿಷಾಲಯ

ಮೇಷ

ಲಾಭಕಾರ್ಯ ಅಧಿಕಾರ ಸೌಖ್ಯತೆ ಗೌರವ ಬಂಧುಪ್ರೀತಿ ಶತ್ರುಂಜಯ ರಾಜಕೀಜನರ ಸಖ್ಯ ಗೃಹಾಭಿವೃದ್ಧಿ, ತಾ|| 22 23 ವಿರೋಧ ಫಲ ಅನಾರೋಗ್ಯ ತುಳಿಸಿ ಪೂಜೆ ಮಾಡಿ ಕ್ಷೇಮ.

ವೃಷಭ

ಸೌಖ್ಯ ಕಡಮೆ ಗೃಹಕೃತ್ಯದಲ್ಲಿ ಅನಾನುಕೂಲ ಜನರಲ್ಲಿ ವಿರೋಧ ವ್ಯಾಪಾರದಲ್ಲಿ ನಷ್ಟ ಜಂಜಲತೆ ಆದಿತ್ಯ ಹೃದಯ ಪಾರಾಯಣ ಮಾಡಿ, ಎಳ್ಳು ದಾನಾ ಕೊಡಿ ಕ್ಷೇಮ, ತಾ || 22 23 ಇಷ್ಟಸಿದ್ಧಿ.

ಮಿಥುನ

ರಾಜಕಾರ್ಯದಲ್ಲಿ ಶುಭ ಮನೆಯಲ್ಲಿ ಮಂಗಳಕಾರ್ಯ ವಾಹನಾದಿ ಸೌಖ್ಯ ಲಾಭ. ತಾ | 20 21 ಸ್ತ್ರೀ ವಿರೋಧ ಬಂಧುಜನರಲ್ಲಿ ಮನಸ್ತಾಪ ವ್ಯಯಾಧಿಕ ಹಸೀಕಡಲೆ ದಾನಾಮಾಡಿ ಶುಭ.

ಕರ್ಕಾಟಕ

ತಾ || 17 20 21 ವಿರೋಧಕಾರ್ಯದಿಂದ ಮನಸ್ತಾಪ ಆಚಾರಭಂಗ ಅನಾರೋಗ್ಯ ಬಂಧುಜನಕ್ಕೆ ತೊಂದರೆ, ಹುತ್ತಕ್ಕೆ ಹಾಲು ಬಿಡಿ ಮಂಗಳ. ಬಾಕೀ ದಿವಸಗಳಲ್ಲಿ ಎಲ್ಲಾ ಅನುಕೂಲಗಳು.

ಸಿಂಹ

ಗೃಹಾಭಿವೃದ್ಧಿ ಮಂಗಳಕಾರ್ಯ ಅಧಿಕಾರವರ್ಗದಿಂದ ಲಾಭ ಬಂಧು ಮರ್ಯಾದೆ ಧನಧಾನ್ಯಾಭಿವೃದ್ಧಿ.

ಕನ್ಯಾ

ಹಿಕವಿಲ್ಲದ ಸೌಖ್ಯತೆ ಮಿತ್ರದ್ವೇಷ ವೃಥಾ ಸಂಚಾರಾಧಿಕ ಭೃತ್ಯಪಲಾಯನ ಅಸ್ಪವರ್ಗದವರಿಗೆ ತೊಂದರೆ ಸೂರ್ಯನಮಸ್ಕಾರ ಮಾಡಿ ಮಂಗಳ. ತಾ || 22 23 ಶುಭ.

ತುಲಾ

ಸದ್ವ್ಯಾಪಾರದಲ್ಲಿ ಅಸಕ್ತಿ ರಾಜಕೀಜನರ ಮನ್ನಣೆ ಗೃಹಾಭಿವೃದ್ಧಿ ದೇಹಾರೋಗ್ಯ ಪುಣ್ಯತೀರ್ಥಸ್ನಾನಫಲ. ತಾ|| 22 23 ಶತ್ರುವಿರೋಧ ಚಿಂತಾಧಿಕ ಶ್ರೀ ಲಕ್ಷ್ಮೀ ಸಹಸ್ರಾರ್ಚನೆ ಮಾಡಿಸಿ ಮಂಗಳ.

ವೃಶ್ಚಿಕ

ಮನೋತ್ಸಾಹ ಧೈರ್ಯಾಧಿಕ ಬಂಧು ಮಿತ್ರ ಸೌಖ್ಯತೆ ಶುಭವಾರ್ತೆ ಜನರಿಂದ ಮರ್ಯಾದೆ ತಾ 20 21 ಅನಾರೋಗ್ಯ ವ್ಯಯಾಧಿಕ ದೇವರಿಗೆ ಕ್ಷೀರಾಭಿಷೇಕ ಮಾಡಿಸಿ ಶುಭ.

ಧನು

ಸತ್ಕಾರ್ಯಸಿದ್ಧಿ ಮಂಗಳಕಾರ್ಯ ಕೀರ್ತಿ ರಾಜಕೀಜನರಿಂದ ಅನುಕೂಲ ದೇವಪೂಜಾದಿ ಲಾಭ. ತಾ || 22 23 ಸ್ವಜನವಿರೋಧ ಶತ್ರುವೃದ್ಧಿ ಅಪಜಯ ರುದ್ರಪೂಜೆ ಮಾಡಿಸಿ ಮಂಗಳ.

ಮಕರ

ಅಧಿಕಾರ ವರ್ಗದವರೊಡನೆ ಪುನಸ್ತಾಪ ಸ್ವಜನವಿರೋಧ ಪಶುಧಾನ್ಯನಷ್ಟ ಸಂಬಾರಾಧಿಕದಿಂದ ಅನಾರೋಗ್ಯ ಚಂಚಲತೆ. ಬ್ರಹ್ಮಚಾರಿ ಪೂಜೆಮಾಡಿ ಶುಭ. ತಾ | 22 33 ಶುಭ ಫಲ.

ಕುಂಭ

ಹಿತರಾಗಿ ತೋರುವವರು ವಿರೋಧ ತಂದುಹಾಕುವರು ಕೆಲಸಕಾರ್ಯಗಳಲ್ಲಿ ಎಚ್ಚರಿಕೆಯಿಂದ ವರ್ತಿಸಿ ವ್ಯಯಾಧಿಕ ಸ್ವಪರ ಜನರಲ್ಲಿ ನಿಷ್ಠುರ, ಸಹಸ್ರನಾಮ ಪಾರಾಯಣ ಮಾಡಿ ಪರಿಹಾರ. ತಾ|| 22 23 ಜನರಲ್ಲಿ ಮರ್ಯಾದೆ ದೇವತಾ ಗುರು ಸೇವೆ.

ಮೀನ

ಪ್ರೀತಿಕರವಾದ ವಸ್ತುಪ್ರಾಪ್ತಿ ಸ್ತ್ರೀ ಪುತ್ರ ಸೌಖ್ಯತೆ ಕಾರ್ಯಲಾಭ. ತಾ || 20 21 ಅನಾರೋಗ್ಯ. ಚಿಂತೆ, ಸ್ತ್ರೀ ವಿರೋಧ, ಸಹಸ್ರನಾಮಾರ್ಚನೆ ಮಾಡಿಸಿ ಮಂಗಳ.

ರಷ್ಯಾಕ್ಕೆ ಸಹಾಯ

ರಷ್ಯಾಕ್ಕೆ ಯುದ್ಧದ ಪದಾರ್ಥಗಳಿಲ್ಲದೆ ಜನರ ಉಪಯೋಗಕ್ಕೆ ಸುಮಾರು 5 ಕೋಟಿ ಪೌಂಡಿನಷ್ಟು ಆಹಾರ ಪದಾರ್ಥಗಳನ್ನು ಕಳುಹಿಸಲಾಗಿದೆ 82000 ಟನ್ ರಬ್ಬರ್, 2000 ಟನ್ ಟಿನ್ ಕಳುಹಿಸಲಾಗಿದೆ. ಕಾರ್ಖಾನೆಗಳಲ್ಲಿ ಉಪಯೋಗಕ್ಕಾಗಿ ವಜ್ರಗಳು ಕಳುಹಿಸಲಾಗಿದೆ. ಇಂಡಿಯಾದಿಂದ ಶೆಣಬು, ಕಡಲೆಕಾಯಿ, ಚರ್ಮ, ಹೆಲ್ಲಾಕ್, ಬಟ್ಟೆ ಮೊದಲಾದುವುಗಳೂ, ಮತ್ತು ಒಂದು ಕೋಟಿಗೆ ಮೂರು ಗೋಣೀಚೀಲಗಳೂ ಕಳುಹಿಸಲಾಗಿದೆ. ಇಂಡಿಯಾದಿಂದ ಕರಾಚಿಗೆ ಕಳುಹಿಸಿ ಅಲ್ಲಿಂದ ಭೂ ಮಾರ್ಗವಾಗಿ ರಷ್ಯಾಕ್ಕೆ ತಲಪಿಸಲಾಗುತ್ತಿದೆ.

ಜೋಹಾನ್ಸ್‌ಬರ್ಗ್ ಏ 13— ನ್ಯಾಯ ವಿರುದ್ಧವಾಗಿ ಮದ್ದು ಗುಂಡುಗಳನ್ನು ಶೇಖರಿಸಿದ್ದಕ್ಕಾಗಿ ಜಾಕೋಬ್ ಬಿಕ್ ವಾರ್ಡ್ ಎಂಬುವನಿಗೆ ಮಿಲಿಟರಿ ಕೋರ್ಟಿನವರು 15 ವರ್ಷ ಸಜೆ ವಿಧಿಸಿದರು.

ಹಿಟ್ಲರ್ ಮುಸಲೋನಿ ಮಾತುಕತೆ

ಲಂಡನ್ ಏ. 11—7 ನೇ ತಾರೀಖಿನಿಂದ 10 ನೇ ತಾರೀಖಿನವರೆಗೆ ಹಿಟ್ಲರ್ ಮುಸಲೋನಿ ಸಮ್ಮೇಳನ ನಡೆಸಿದರೆಂದೂ, ಎರಡು ಕಡೆಯ ಪ್ರಮುಖ ಅಧಿಕಾರಿಗಳೂ ಇದ್ದರೆಂದೂ, ಸಾಮಾನ್ಯ ರಾಜಕೀಯ ವಿಚಾರ ಮತ್ತು ರಾಜತಂತ್ರ ವಿಚಾರವಾ ಎಲ್ಲಾ ವಿಷಯಗಳ ಬಗ್ಗೆ ನಡೆಯಿಸಲಾಯಿತೆಂದೂ ಹಿಟ್ಲರ್ ಮುಸಲೋನಿಗಳಿಬ್ಬರೂ ಯುದ್ಧ ನುಂಡುವರಿಸಿ ತಮ್ಮ ಆಡಳಿತಗಳಿಗೊಳಪಟ್ಟ ಕಡೆಗಳೆಲ್ಲೆಲ್ಲಾ ಸೈನ್ಯ ಜಮಾವಣೆ ಮಾಡುವದರಲ್ಲಿ ನಿರ್ಧಾರವನ್ನು ವ್ಯಕ್ತ ಪಡಿಸಿದರೆಂದೂ, ಮಾತುಕತೆಗಳು ಬಹು ವಿಶ್ವಾಸ ಮತ್ತು ಸಹೃದಯದಿಂದ ನಡೆಯಿತೆಂದೂ ಜರ್ಮನ್ ನ್ಯೂಸ್ ಏಜೆನ್ಸಿ ಪ್ರಕಟಿಸಿದೆ

ಚುಂಕಿಂಗ್ ಪಾಳೇ !

ಚುಂಕಿಂಗ್ ನಗರವು ಮತ್ತೆ ಇಮಾನ ಧಾಳಿಗೆ ತುತ್ತಾಗುವ ಭೀತಿ ಪ್ರಾರಂಭವಾಗಿದೆ. ಹೋದ ಭಾನುವಾರ ಧಾಳಿಯಾಯಿತು ಈ ನಗರಕ್ಕೆ 1939 ನೇ ಜೂನಿಗೆಯಲ್ಲಿ ಧಾಳಿ ಆಂಭಿಸಿದ್ದು ಇದುವರೆಗೆ ನಡೆಯುತ್ತಲೇ ಇದೆ. ಈ ಕಾಲದಲ್ಲಿ ಒಂದು ದಿವಸ 250 ವಿಮಾನಗಳು ಏಕ ಕಾಲದಲ್ಲಿ ಬಂದಿದ್ದುವು. ಶೇಕಡ 7 ರಂತೆ ನಗರವು ಹಾಳಾಗಿದೆ. ಆದರೆ ಇದೇ ಕಾಟವಿಲ್ಲ. ಇನ್ನೂ ಎದೆಗುಂದದೆ ಯುದ್ಧ ನಡೆಸುತ್ತಲೇ ಇದೆ. ರಾಜಧಾನಿಯಾದ ಚುಂಕಿಂಗಿನಲ್ಲಿ ಇಲ್ಲಿಯ ಹಾಗೆ ಸೈರನ್ ಕೂಗಿಸುವುದಿಲ್ಲ. ವಿಮಾನ ಧಾಳಿಯ ಸೂಚನೆ ಕಂಡ ಕೂಡಲೇ ಎರಡು ಪ್ರಕಾಶವಾದ ಬೆಲೂನುಗಳನ್ನು ಹಾರಿಸುವರು. ಶತ್ರುಗಳ ವಿಮಾನಗಳು ಮಾಯವಾದನಂತರ ಎರಡು ಹಸಿರು ಪತಾಕೆಯನ್ನು ಕೆಳಗಡೆ ಕಟ್ಟುವರು.

ಗೌವರ್ನರ ಮೇಲೆ ಟೀಕೆ ಮಾಡುವುದು ತಪ್ಪಲ್ಲ.

ಬಂಗಾಳ ಮಂತ್ರಿ ಮಂಡಲದಲ್ಲಿದ್ದ ಡಾ! ಶ್ಯಾಮಪ್ರಸಾದ್ ಮುಖಿಯವರು ಕೆಲಸಕ್ಕೆ ರಾಜೀನಾಮೆ ಕೊಟ್ಟ ಕಾಲದಲ್ಲಿ ತಾವು ಗೌವರ್ನರಿಗೆ ಬರೆದ ಪತ್ರದಲ್ಲಿ ತಾವು ಯಾತಕ್ಕೆ ರಾಜೀನಾಮೆ ಕೊಟ್ಟ ಕಾರಣ ತಿಳಿಸಿದ್ದರು. ಈ ಪತ್ರದ ನಕಲನ್ನು ಬಂಗಾಳದ ಯಾವ ಪತ್ರಿಕೆಗಳೂ ಪ್ರಕಟಿಸಲಿಲ್ಲ, ಇದನ್ನು ಡಾಕ್ಟರ್ ಪುಸ್ತಕರೂಪವಾಗಿ ಪ್ರಕಟಿಸಿದರು. ಇವನ್ನು ಸರ್ಕಾರದವರು ಮುಟ್ಟುಗೋಲು ಹಾಕಿದರು. ಇವನ್ನೆ ಮುಂಬಯಿ " ಜನ್ಮಭೂಮಿ " ಪತ್ರಿಕೆಯು ಪ್ರಕಟಿಸಿತು. ಸರ್ಕಾರದವರು ಇವರು ಕೊಟ್ಟಿದ್ದ ಹಣವನ್ನು ಸರ್ಕಾರಕ್ಕೆ ಸೇರಿಸಿಕೊಂಡು ಮತ್ತೆ ಹಣವನ್ನು ಕೊಡಬೇಕೆಂದು ಕೇಳಿದರು. ವೃತ್ತ ಪತ್ರಿಕೆಯ ಮಾಲೀಕರು ಹೈ ಕೋರ್ಟಿನಲ್ಲಿ ದಾವಾ ಹೂಡಿರುತ್ತದೆ. ಹೈ ಕೋರ್ಟಿನ ಮೂವರು ಜಡ್ಜಿಯವರು ಕಲೆತು ವಿಚಾರಣೆ ನಡೆಸಿ ಒಬ್ಬ ಮಂತ್ರಿಗೂ ಕೆಲಸಬಿಡುವಾಗ ಕಾರಣವನ್ನು ತಿಳಿಸಿ ಗವರ್ನರಿಗೂ ಮಂತ್ರಿಗಳಿಗೂ ಇರುವ ಭಾಂಧವ್ಯದ ವಿಷಯವಾಗಿ ಮಧುರ ಮಾತಿನಿಂದ ಬರೆಯುವುದು ತಪ್ಪಿಲ್ಲವೆಂದು ರೇವೃತ ಕೊಟ್ಟು ವೃತ್ತಪತ್ರಿಕೆಯವರು ಪ್ರಕಟಿಸಿದುದು ಸಹ ತಪ್ಪಿಲ್ಲವೆಂದರು.

ರಷ್ಯಾ ಬಗ್ಗೆ ಕೃತಜ್ಞತೆ

ಯುದ್ಧ ಮುಗಿದನಂತರ ರಷ್ಯನರಿಗೆ ತಮ್ಮ ಕೃತಜ್ಞತೆ ತೋರಿಸಲು ಆಂಗ್ಲೇಯರು ಅಮೆರಿಕಾದವರೂ ಸ್ಟಾಲಿನ್‌ಗ್ರಾಡ್ ನಗರವನ್ನು ಕಟ್ಟಿಕೊಡಬೇಕಂತೆ. ಹಿಂದೆ ಮಾಸ್ಕೊ ಪಟ್ಟಣವನ್ನು ಲಂಡನ್ನಿನ ವಿನ್ಲೆನಿಂದ ಕಟ್ಟಿದ್ದು ಜ್ಞಾಪಕಕ್ಕೆ ಬರುವುದು ಇದು ಕಥೆಯಲ ಇದನ್ನು ಓದಿರಿ 1812 ರಲ್ಲಿ ಮಾಸ್ಕೊ ನಗರದ ಸಮೀಪಕ್ಕೆ ನೆಪೋಲಿಯನ್ ಬರಲು, ರಷ್ಯನರು ಭೂಮಿಯನ್ನು ಆಗೆದು ಕಂದಕಮಾಡಿದರು ಸೈನೋಲಿಯನ್ ನಗರಕ್ಕೆ ಬೆಂಕಿ ಹಾಕಿದನು, ವಾಟರ್ಲೂ ಕೌಲು ನಡೆದ ನೇಲೆ ಮಾಸ್ಕೋ ನಗರವನ್ನು ಕಟ್ಟಲು ಶುರುಮಾಡಿದರು. ಮೂರು ವರ್ಷ, ಆಂದರೆ ಹತ್ಯಾವರ್ತಿ ಹಿವಗಾಲವಾಯಿತು, ಬೇಸಿಗೆ ಕಾಲವಾಯಿತು. ಇಷ್ಟಾದರೂ ಸ್ಮಶಾಣದಂತಿತ್ತೇ ವಿನಃ ಹೇಗೆ ನಗರವನ್ನ ಕಟ್ಟಬೇಕೆಂಬುದ. ನಿರ್ಧಾರವಾಗಲಿಲ್ಲ ರಷ್ಯಾ ಚಕ್ರವರ್ತಿಯೂ ರಷ್ಯಾ ಇಂಜಿನಿಯರುಗಳೂ ಯೋಚಿಸುತ್ತಲೇ ಇದ್ದರು. ಈಗ ಲಂಡನ್ ಒಳಭಾಗದಲ್ಲಿರುವ ಪಂಪ್ಸ್ ಕೋರ್ಟ್ ಕ್ಯಾಸ್, ಮ್ಯಾಂಚಿಸ್ಟರ್ ಸ್ಕ್ವೇರ್, ಕಿಂಗ್ಸ್ ಕ್ರಾಸ್ ಈ ಕಡೆಗಳಲ್ಲಿ ಲಂಡನ್ನಿನ ಗೊಬ್ಬರವನ್ನು ತಂದುಹಾಕುತ್ತಿದ್ದರು. ಈ ರಾತಿಯುಬಿಟ್ಟದೋಷಾದಿಯಲ್ಲಿ ದಿನೇದಿನೆ ಬೆಳೆಯುತ್ತಾ ಬಂದಿತು. ಲಂಡನ್ ನಗರವನ್ನು ಈ ಸ್ಥಳಗಳಿಗೆ ಒಡಾ

ವರ್ತಮಾನ

ಲಂಡನ್ ಏ. 12—ನ್ಯೂಗಿನಿಯ ಪೋರ್ಟಸಲ್ಲಿ ಮಿತ್ರ ಮಂಡಲಿ ನೌಕಾಗಳನ್ನು ಎದುರಿಸಲು ಬಂದಿದ್ದ 45 ಜಪಾನ್ ಬಾಂಬರ್ ಫೈಟರ್ ವಿಮಾನಗಳನು ಮಿತ್ರ ಮಂಡಲಿ ವಿಮಾನಗಳು ಎದುರಿ, 23 ನ್ನು ಹೊಡೆದುರುಳಿಸಿದುವು. ಮಿತ್ರ ಮಂಡಲಿಯವರಿಗೆ ಸ್ವಲ್ಪ ನಷ್ಟವಾಗಿದೆ.

ಇಂಗ್ಲೆಂಡಿನಲ್ಲಿ ಪ್ರಸಿದ್ಧವಾದ 5 ಸಿಗರೇಟ್ ಕಂಪನಿಗಳು ಒಟ್ಟುಸೂಡಿ ಕೆಲ ಸಮಾಡುವುವು. ಇವರು ತಯಾರಿಸುವ ಸಿಗರೇಟ್‌ಗಳು ಅಲ್ಲಿ ತಯಾರಾಗುವ ಸಿಗರೇಟ್‌ಗಳಲ್ಲಿ ಶೇಕಡ 80—90 ರಂತೆ.

ಡೆನ್ಮಾರ್ಕಿನಲ್ಲಿ ಚುನಾವಣೆಯಾಯಿತು. - ನಾಜಿಗಳು ಶೇಕಡ ಎರಡರಂತೆ ಓಟುಗಳನ್ನು ಪಡೆದರು.

ದಕ್ಷಿಣ ಆಫ್ರಿಕಾಕ್ಕೆ ಬಂಪರ್ ತೇಲುವೆ ಸಿಲ್ವಾಣವು ಬಂದಿದೆ. ಇದರ ಉದ್ದ 1200 ಅಡಿ ಅಗಲ 150, ಎಂಥಾ ದೊಡ್ಡ ಹಡಗೂ ಇಲ್ಲಿ ತಂಗಲು ಅನುಕೂಲವಾಯಿತು.

ಹೆಚ್ಚಾಗಿ ಬೆಳೆಯಿರಿ ಎಂದು ಎಲ್ಲರೂ ಹೇಳುವರು. ಹೆಚ್ಚಾಗಿ ಬೆಳೆದರೆ ಅದೆಲ್ಲ ರೈತನಿಗೆ ಸೇರದೆ ಸಾಹುಕಾರರ ಜಾಯಿಗೆ ಬೀಳುವುದು. ಸರ್ಕಾರದವರು ಜಮೀನು ಇಲ್ಲದ ರೈತರಿಗೆ ಜಮೀನು ಕೊಟ್ಟು ಸಹಾಯ ಮಾಡಿದರೆ ಅದರಿಂದ ಪ್ರಯೋಜನವೇ ಹೊರ್ತು ಸುಮ್ಮನೆ ಹೆಚ್ಚಿಗೆ ಬೆಳೆಯಿರಿ ಎಂದರೆ ಏನೂ ಪ್ರಯೋಜನವಿಲ್ಲ.

ನ್ಯೂ ಯಾರ್ಕ್ 11— ದಕ್ಷಿಣ ಆಫ್ರಿಕಾದಲ್ಲಿನ ಮಿತ್ರ ಮಂಡಲಿ ಮುಖ್ಯಸ್ಥಾನದಿಂದ ಬಂದಿರುವ ವರ್ತಮಾನ ಪತ್ರಿಕೆಯು ಅವರ ಫಂಡೊಕ್ ಕಣಿವೆಯನ್ನು ವಶಪಡಿಸಿಕೊಂಡಿರುವರು ರೊಮೆಲ್ಲನು ಸೂಸ್ ಜಿಜೆ ಹಿನ್ನೆಟ್ಟಿರುವನು. ಬ್ರಿಟಿಷ್ 8 ನೇ ಪಡೆಯು ಉತ್ತರದ ಕಡೆಯಿಂದ ಮುಂದುವರಿಯುತ್ತಿದೆ. ರೊಮೆಲ್ಲನು ಸೊಸನ್ನು ರಕ್ಷಿಸುವಂತಿಲ್ಲ.

ವಣ ಮಾಡಬೇಕು ಈ ಗೊಬ್ಬರವಾಸನೆಯಿಂದ ಲಂಡನ್ ನಗರದ ಆರೋಗ್ಯ ಕೆಡುವುದಿಲ್ಲವು ಎಂದು ಲಂಡನ್ನಿನಲ್ಲಿ ಜನರು ಭೀತಿಗೊಳ್ಳುತ್ತಿದ್ದಾರೆ, ಈ ವಿಷಯವು ರಷ್ಯಾ ಚಕ್ರವರ್ತಿಗೆ ತಿಳಿದಿತು ಲಂಡನ್ನಿಗೆ ತನ್ನ ಇಂಜಿನಿಯರುಗಳನ್ನು ಕಳುಹಿಸಿದನು. ಲಂಡನ್ನಿನವರು ಈ ಮಣ್ಣನ್ನು ಮಾರಿದರು. ಇದನ್ನು ಕಂಡು ಈ ಮಣ್ಣಿನಿಂದ ಲೇಮಾಸ್ಕೊ ನಗರವನ್ನು ಕಟ್ಟಿದರು

ಟೋಕಿಯೋದಲ್ಲಿ ಯುದ್ಧಾನಂತರ

ಕ್ಯೂಬಿರ್‌ನಲ್ಲಿ ಏಂಬೆ ನಡೆದ ತೀರ್ಮಾನಕ್ಕೆ ಈಗ ಸ್ವಲ್ಪ ಹೆಚ್ಚು ವಿವರಗಳನ್ನು ಸೇರಿಸಿ ಒಂದು ಪ್ರಕಟನೆ ಹೊರಡಿಸಿಲಾಗಿದೆ. " ಯುದ್ಧ ನಂತರ ಮಿತ್ರ ಪಕ್ಷದ ಸೈನಿಕರು ಟೋಕಿಯೋ ನಗರವನ್ನು ಹಂಗಾಮು ಆಕ್ರಮಿಸಿಕೊಳ್ಳುವುದು. ಜಪಾನೀಯರ ಯಾವ ಆಯುಧವನ್ನು ಇಟ್ಟುಕೊಳ್ಳಬಾರದು. ಇವರಿಗೆ ಚಕ್ರಾಧಿಪತ್ಯವಿರಕೂಡದು. ಕೋರಿಯಾ ಮಂಚೂರಿಯಾ ಏಂದಿನ ಯುದ್ಧದಲ್ಲಿ ಕೊಟ್ಟಿದ್ದ ಮ್ಯಾಂಡೇಟೆಡ್ ದ್ವೀಪಗಳನ್ನು ಕಿತ್ತುಕೊಳ್ಳಬೇಕು. ಚೈನಾದವರ ಫರ್ಮೋ ದ್ವೀಪವು ಚೈನಾಕ್ಕೆ ವಾಪಸ್ಸು ಕೊಡಿಸಬೇಕು. ಚೈನಾದಲ್ಲಾದ ನಷ್ಟಕ್ಕೆ ಜಪಾನು ಕೂಲಿಗಾರರು ಚೈನಾದಲ್ಲಿ ಒಂದು ಕೆಲಸಮಾಡಬೇಕು. ಜಪಾನ್ನ ತಲೆ ಎತ್ತದೆ ಯುದ್ಧ ಮಾಡುವ ಆಶಯಿಟ್ಟುಕ್ಕೆಲೇ ಒಳ್ಳೆದೆಂದು ತಿಳಿದುಕೊಳ್ಳುವ ಹಾಗೆ ಮಾಡಬೇಕಾದರು. ಲಾರ್ಡ್ ಹೇಲಿ ಹೇಳಿದರು ಹಾಂಕಾಂಗ್, ಸಿಂಗಪೂರ್ ಓಪನ್ ಪೋರ್ಟ್ ಆಗಿರಬೇಕು' ಪೂರ್ಣಾಂಗವಾಯಿಂದ ಚೈನಾಕ್ಕೆ ಅನುಕೂಲವಾಗಬೇಕೆಂದರು. ಕಲೋನಿಗಳ ವಿಷಯ ಚರ್ಚೆಗೆ ಬಾಪಾಗ ಲಾರ್ಡ ಹೇಲಿಯವರು " ಕಾಲೋನಿಗಳು ತಾವು ರಾಜ್ಯ ಭಾರ ಯೋಗ ಇದೆಯೆಂದು ತೋರ್ಪಡಿಸಿಕೊಂಡಾಗ ಅವರಿಗೆ ಕೊಡಬಹುದೆಂದರು.

ಬಂಗಾಳದಲ್ಲಿ ಮುಸಲ್ಮಾನ್ ಲೀಗ್ ನವರು ಮಂತ್ರಿ ಮಂಡಲವನ್ನು ಏರ್ಪಡಿಸುತ್ತಾರೆಂದು ತಿಳಿಯಬಂದಿದೆ.

ವಾಸ್ಕೊ ಏ. 11—ರಷ್ಯಾರಂಗದಲ್ಲಿ ತೀವ್ರ ಸ್ಥಿತಿಯಲ್ಲಿ ಎರಡು ಕಡೆಯವರೂ ಅಚ್ಚಕಟ್ಟಾದ ಸ್ಥಳಗಳನ್ನು ಪಡೆಯಲು ಕಾರ್ಯ ನಡೆಸುತ್ತಿರುವರು.

ಲಂಡನ್ ಏ, 11—ನಿನ್ನೆ ರಾತ್ರಿ ಜರ್ಮನಿಯ ವಾಯುವ್ಯ ಭಾಗದಲ್ಲಿ. ಮಿತ್ರ ಮಂಡಲಿ ಧಾಳಿ ನಡೆದಿದೆ.

ಕಾರ್ಡಿಫ್ ಏ 11—ಹಿಟ್ಲರು ಕಾರ್ಯದಲ್ಲಿ ಜಯಶೀಲನಲ್ಲವಾಗಿ ತೆಗೆದು ಹಾಕಲ್ಪಡುವನೆಂದು ಸರ್ಕಾರದ ಮಾಜಿ ರಾಜಕೀಯ ಸಲಹೆಯವನಾದ ಲಾರ್ಡ್ ವಾನ್ಸಿಟಾರ್ಟ್ ಹೇಳಿರುವರು. ಹಿಟ್ಲರಿಂದ ಬಿಡುಗಡೆ ಪಡೆಯುವುದೇ ನಮ್ಮ ಕಾರ್ಯವಾಗಿದೆ.

ಲೆನಿನ್‌ಗ್ರಾಡ್ ಬಳಿ ನಾಜಿಗಳು ದೊಡ್ಡ ಯುದ್ಧ ಹೂಡಲು ಏರ್ಪಡಿಸಿಕೊಂಡಿದ್ದಾರೆ.

ವಿವಿಧ ವಿಷಯ

ರಷ್ಯಾದಲ್ಲಿ 15 ವರ್ಷದಿಂದ ಒಬ್ಬ ಶಾಸ್ತ್ರಜ್ಞನು ನೂತನ ವಿಧದಲ್ಲಿ ಗೋಧಿ ಬೆಳೆ ಮಾಡುವುದನ್ನು ಕಂಡುಹಿಡಿದಿರುವನು; ಒಂದು ವರ್ಷ ಈ ಗೋಧಿ ಬೆಳೆ ನಾಟಾ ಹಾಕಿದರೆ ಮೂರು ವರ್ಷ ಬೆಳೆಯನ್ನು ತೆಗೆಯಬಹುದು. ಇವನಿಗೆ ಸ್ಟಾಲಿನ್ನಿಂದ ಒಂದು ಲಕ್ಷ ರೂಬೆಲ್ ಬಹುಮಾನ ಬಂದಿತು. ಹೋದ ವರ್ಷ ಖಾಜಕ್‌ಸ್ತಾನ್‌ನಲ್ಲಿ 2000 ಎಕರೆಯಲ್ಲಿ ನಿತ್ತನೆ ಮಾಡಿದರು. ಈ ವರ್ಷ ಫಲ ತೆಗೆದುಕೊಂಡರು. ಇನ್ನೆರಡು ವರ್ಷ ನಾಟಾ ಮಾಡುವ ಕೆಲಸವಿಲ್ಲ. ಇಲ್ಲಿಯ ರೈತರೆಲ್ಲರೂ ರಣರಂಗಕ್ಕೆ ಹೋಗಲು ಅನುಕೂಲವಾಯಿತು.

ಅಮೇರಿಕಾದಲ್ಲಿ ಕೂಲಿಗಾರರಿಗೆ ವಾರಕ್ಕೆ ರೂ 110 ಸಂಬಳ ಕೊಡುವರು. ಈ ದೇಶದಲ್ಲಿ ?

ಕುದುರೆಗಳ ಅಥವಾ ಎತ್ತುಗಳ ಲಾಳಗಳು ರಸ್ತೆಯ ಮೇಲೆ ಬಿದ್ದಿದ್ದರೆ, ಅವನ್ನು ತಂದುಕೊಡುವವರಿಗೆ ಒಂದಕ್ಕೆ ಒಂದಾಣೆಯಂತೆ ಕೊಡುವದಾಗಿ ಕರ್ನೂಲಿನ ಪೋಲೀಸು ಇಲಾಖೆಯವರು ಪ್ರಚಾರಪಡಿಸಿರುವರು.

ಫ್ರಾನ್ಸಿನಲ್ಲಿ ಕೃತ್ರಿಮ ಹಲ್ಲುಗಳಿಗೆ ಕೂಡ ಇನ್ನು ಮೇಲೆ ಶೇಷನಿಂಗ್ !

ಜರ್ಮನರು ತಯಾರಿಸುತ್ತಿದ್ದ ಏ. ಏ. ಗ್ಯಾ ಮಾಡುವ ರಹಸ್ಯವನ್ನು ಅಮೇರಿಕಾದವರು ತಿಳಿದುಕೊಳ್ಳಲು ಐದೂಕಾಲು ಕೋಟಿ ರೂಪಾಯಿಯನ್ನು ಗೂಢಚಾರರ ಮುಖಾಂತರ ಚೆಲ್ಲಿದರು. ಈಗ ಈ ಪ್ರವಾಹವು ನಿಂತಿದೆ. ಅಮೇರಿಕಾದ ಈ ರಹಸ್ಯವು ಇದುವರಿಗೆ ಹೊರಗೆ ತಿಳಿಯದಂತೆ ನೋಡಿಕೊಳ್ಳುತ್ತಿದ್ದರು.

ಇಂಗ್ಲೆಂಡಿನಲ್ಲಿದ್ದ ಒಂದು ಸ್ಪೇನ್ ಪುರಾತನ ದೇವಾಲಯವನ್ನು ಕೊಂಡು ಕೊಂಡು, ಕೊಂಡುಕೊಂಡ ಬೆಲೆಗೆ ಎರಡರಷ್ಟು ಖರ್ಚುಮಾಡಿ ಒಂದು ಹಡಗಿನಲ್ಲಿ ಅಮೇರಿಕಾಕ್ಕೆ ರವಾನಿಸುತ್ತಾರೆ. ಅಲ್ಲೇ ಈ ದೇವಾಲಯವನ್ನು ಕಟ್ಟುವರಂತೆ.

ಕಾಗದದ ಅಭಾವದಿಂದ ಇನ್ನು ಮುಂದೆ ಯಾವ ಅಂಗಡಿಗಳಲ್ಲಿಯೂ ಯಾವ ಪದಾರ್ಥಗಳನ್ನು ಹಳೇ ನ್ಯೂಸ್ ಪೇಪರ್ ಏನಾ ಬೇರೆ ಕಾಗದಗಳಲ್ಲಿ ಕಟ್ಟಿಕೊಡ ಕೂಡದು. ಈ ಆಜ್ಞೆ ಆಹಾರ ಪದಾರ್ಥಗಳಿಗೆ ಅನ್ವಯಿಸುವುದಿಲ್ಲ.

ಈ ವರ್ಷ ಲಕ್ನೋ ವಿಶ್ವವಿದ್ಯಾಸಿಲಯದವರು ಕಾನ್‌ವೆಕೇಷನ್ ನಡೆಸುವುದಿಲ್ಲ. ಡಿಗ್ರಿ ಪಡೆದವರ ಸರ್ಟಿಫಿಕೇಟುಗಳನ್ನು ಟಪಾಲಿನಲ್ಲಿ ವಿದ್ಯಾರ್ಥಿಗಳಿಗೆ ರವಾನಿಸುವರು.

ರಷ್ಯಾದವರೂ ಸಹ ಈಗ ಒರ್ಮಾಯ ಮೇಲೆ ವಿಮಾನ ಧಾಳಿಮಾಡಲು ಪ್ರಾರಂಭಮಾಡಿರುತ್ತಾರೆ. ನಿನ್ನೆ ದಿವಸ ಕೋನಿಗ್ಸ್‌ಬರ್ಗ್ ಮೇಲೆ ಧಾಳಿಮಾಡಿ ಶತ್ರುವಿಗೆ ವಿಪರೀತ ನಷ್ಟವಾಡಿದರು.

ಆಸ್ಟ್ರೇಲಿಯಾ ಪ್ರಧಾನ ಮಂತ್ರಿಯಾದ ಮಿ|| ಕರ್ಟಿನ್‌ರವರು ಯುದ್ಧವು ಇ ಯುದ್ಧವು ಇನ್ನು ಕೆಲವು ವರ್ಷ ನಡೆಯಬಹುದೆಂದರು.

ಹರಿದ್ವಾರದಲ್ಲಿ ನಡೆದ ಹಿಂದೂ ಸಭಾ ಕಾನ್‌ಫರೆನ್ಸ್‌ನಲ್ಲಿ ರಾಜಮಹೇಶ್ವರ್ ದಯಾಲ್ ಸೇಠ್. ಕೋಟ್ಯಾಧೀಶರಾಜರುಬ್ರಿಟಿಷ್ ಗವರ್ನ್ಮೆಂಟಿನವರಿಗೆ ಕೆಲಸಬಿಡಲು ಮನಸ್ಸಿಲ್ಲ ಈಚೆಗೆ ವೈಸರಾಯರು ಮಾಡಿದ ನಿರ್ಣಯವು ಇದರಿಂದ ವ್ಯಕ್ತಪಡುತ್ತೆಂದರು.

ಮುಂಬಯಿ ಟೈಮ್ಸ್ ಆಫ್ ಇಂಡಿಯಾ ಆಂಗ್ಲೇಯ ವಾರ ಪತ್ರಿಕೆಯಲ್ಲಿ (ಪೇಜು 20 ತಾ 11—4—43) ಮೈಸೂರು ಮಹಾರಾಜರನ ತಂಗಿ ಸನಂದ ಮತ್ತು ಅವರ ಕೊಟ್ಟ ಯುವರಾಜರನ ಭಾವಚಿತ್ರಗಳನ್ನು ಛಾಪಿಸಿಲಗ್ನವು ಬೆಂಗಳೂರಿನಲ್ಲಿ ನಡೆಯಿತೆಂದು ಬರೆದಿದೆ. ಇಷ್ಟೇಕೆ ಲಂಡನ್ ಟೈಮ್ಸ್ ಪತ್ರಿಕೆಯು ಹಿಂದಿನ ಯುದ್ಧದಲ್ಲಿ ಯುವರಾಜರ ಭಾವಚಿತ್ರವನ್ನು ಪ್ರಕಟಿಸಿ ಅದು ಮೈಸೂರು ಮಹಾರಾಜರ ಭಾವಚಿತ್ರವೆಂದು ಬರೆದಿರಲಿಲ್ಲವೇ ?

ಬ್ರಾಹ್ಮಣರಿಲ್ಲದೆ ಆಗುವುದಿಲ್ಲ !

ಸ್ಯಾ. ಸಿ. ವಿ. ರಾಮರ್‌ರ ಚರಿತ್ರೆಯನ್ನು ಬರೆದ ಜೋಕಿಂ ಬಾಲ್ಯ ರವರು ಹೀಗೆ ಬರೆದಿರುವರು— ಮದ್ರಾಸು ಬ್ರಾಹ್ಮಣರು ಲೆಕ್ಕ ಮಾಡುವವರಲ್ಲಿಯೂ ಆದಾಯವ್ಯಯದ ಒಜ್ಜೆಟ್ ಮುಂತಾದುವುಗಳನ್ನು ತಯಾರ್ಮಾಡುವುದರಲ್ಲಿಯೂ ಅದ್ವಿತೀಯರು. ಇವರಿಗೆ ಸಮನಾದವರು ಹಿಂದೂಸ್ಥಾನದಲ್ಲಿ ಮತ್ತಾರೂ ಇಲ್ಲ. ಯಾವ ಪರೀಕ್ಷೆಯಲ್ಲಿ ಬೇಕಾದರೂ ಕೂರಿಸಿ ನೋಡಿ, ಇವರೇ ಮೊದಲನೆಯವರಾಗಿ ಬರುತ್ತಾರೆ. ಅಲ್ಲದೆ ಪರೀಕ್ಷೆಯಲ್ಲಿ ತೇರ್ಗಡೆ ಯಾಗುವವರ ಸಂಖ್ಯೆಯಲ್ಲಿ ಬಹುಭಾಗವು ಇವರಿಗೇ ಸಲ್ಲುವುದು. ಯಾವ ಕೆಲಸಕ್ಕೆ ಬೇಕಾದರೂ ಎಂತಹ ಕಠಿಣ ಪರೀಕ್ಷೆಯನ್ನು ಬೇಕಾದರೂ ಇಡಿ, ಎಷ್ಟು ಚಮತ್ಕಾರವಾದ ಪ್ರಶ್ನೆಯನ್ನು ಬೇಕಾದರೂ ಕೇಳಿ. ಈ ಮದರಾಸ್ ಬ್ರಾಹ್ಮಣರು ಸುಲಭದಲ್ಲಿ ಉತ್ತರ ಕೊಡುವರು. ಈ ಮದರಾಸು ಬ್ರಾಹ್ಮಣರು, ಅನ್ನ. ಬೇಳೆ. ತರಕಾರಿ, ಮಜ್ಜಿಗೆ ಇವನ್ನು ತಿಂಡು, ಯಾಗರೂ ಅಸಾಧ್ಯವಾದ ಸರ್ಕಾರಿ ಉದ್ಯೋಗವನ್ನು ದೆಹಲಿಯಲ್ಲಿಯೂ, ಸಿಂಲಾದಲ್ಲಿಯೂ ಸಂಪಾದಿಸಿರುವರು. ಇಂಡಿಯಾ ಸರ್ಕಾರದ ಆಡಿಟ್ ಮತ್ತು ಅಕೌಂಟ್ ಇಲಾಖೆಯಲ್ಲಿ ಸಮುದ್ರದಾಚೆಗೆ ಇವರಿಲ್ಲದ ಯಾವ ಶಾಖೆಯೂ ಇಲ್ಲ. ತಲತಲಾಂತರದಿಂದ ಇಂಡಿಯಾ ಸರ್ಕಾರದ ಫೈನಾನ್ಸ್ ಮೆಂಬರುಗಳು ಇಂಗ್ಲೆಂಡಿನಿಂದ ಬಂದವರೂ ಸಹ, ಈ ಮದರಾಸು ಬ್ರಾಹ್ಮಣರನ್ನು ತನ್ಮಲ್ಲಿಟ್ಟುಕೊಂಡಿದ್ದರು. ಈಗ ಬ್ರಿಟಿಷ್ ಮಂತ್ರಿಮಂಡಲದಲ್ಲಿರುವ ಯುದ್ಧದ ಸೆಕ್ರೆಟರಿ ಸರ್ ಜೇಮ್ಸ್ ಗ್ರಿಗ್‌ರವರು ಸಹ ಬ್ರಾಹ್ಮಣರ ಸಹಾಯದಿಂದ ಕೆಲಸ ಜರುಗಿಸುತ್ತಿದ್ದರು. ಮುಂದೆ ಸ್ವರಾಜ್ಯ ಪದವಿ ಬಂದರೂ ಹಣಕಾಸಿನ ಇಲಾಖೆಗೆ ಈ ಮದರಾಸ್ ಬ್ರಾಹ್ಮಣರ ಸಹಾಯ ಬೇಕೇ ಬೇಕಾಗುವುದು. ಇವರು ಷಾರ್ಟ್‌ಹ್ಯಾಂಡ್ ರೈಟರ್ ಕೆಲಸದಿಂದ ಭಾರಿ ಉದ್ಯೋದಗಳಲ್ಲಿರುವರು, ಇವರಂತೆ ಕೆಲಸ ಮಾಡುವವರು ಮತ್ಯಾರಿರುವರು ? ಇವರಿಲ್ಲದ ಇಲಾಖೆಯೇ ಇಲ್ಲ. ಇವರು ವೃತ್ತಪತ್ರಿಕಾ ಕ್ಷೇತ್ರದಲ್ಲಿಯೂ ಇರುತ್ತಾರೆ. ದೇಶಕ್ಕೆ ಇವರಿಂದ ಹೆಚ್ಚು ಪ್ರಯೋಜನವಿದೆ.

ಜಪಾನ್ ಪ್ರಧಾನ ಮಂತ್ರಿ

ಜಪಾನಿನ ಪ್ರಧಾನಮಂತ್ರಿ ಟೋಜೋಗೆ ಈಗ ಬಹಳ ಯೋಚನೆಯಾಗಿದೆ. ರಾತ್ರಿಯು ನೇಳೆಯಲ್ಲಿ ನಿದ್ರೆ ಬರುವುದಿಲ್ಲವಂತೆ. ಸ್ವಪ್ನ ಸಹಾ ಕಾಣುತ್ತಿರಬಹುದಲ್ಲವೆ ? ಅಮೆರಿಕಾದವರು ಈಗ ತಯಾರಿಸುವ ಯುದ್ಧ ಸಾಮಗ್ರಿಗಳನ್ನು ನೋಡಿ ಭಯವಾಗಿರುವುದು. ಈಗ ಜಪಾನಿಗೆ ಮುಂದೆ ಏನಾಗಬಹುದೆಂಬ ಶಂಕೆಯುಂಟಾಗಿದೆ, ಈಗಲೂ ಟೋಜೋ ಒಂದು ವಿಶೇಷ ನಡೆದು ಅದರಿಂದ ಜಯವಾಗಬಹುದೆಂದು ಮನಸ್ಸಿನಲ್ಲಿ ಮಂಡಿಗೆ ತಿನ್ನುತ್ತಿರುವನು. ಈ 16 ತಿಂಗಳಲ್ಲಿ ತಾನು ಗೆದ್ದದ್ದು ತನಗೆ ನಷ್ಟವೇ ಹೊರತು ಪ್ರಯೋಜನವಿಲ್ಲ ಈಗ ಜಪಾನಿನಲ್ಲಿ ತಯಾರಾಗುವ ಯುದ್ಧ ಸಲಕರಣೆಗಳನ್ನು ನೋಡಿ ಭಯವಾಗಿದೆಯಂತೆ. ಮಿತ್ರರಾದ ಹಿಟ್ಲರ್ ಮುಸಲೋನಿಗಳಿಂದ ಏನೂ ಪ್ರಯೋಜನವಾಗದಿರುವುದು ಈಗ ಜ್ಞಾನೋದಯವಾಗಿರುವುದು, ಇವನೊಬ್ಬನೇ ಮಿತ್ರ ಪಕ್ಷದವನೆನ್ನ ಎದುರಿಸಬೇಕು. ಸಹಾಯಕ್ಕೆ ಬರುವವರು ಯಾರೂ ಇಲ್ಲದಹಾಗಿದೆ.

ಮಿತ್ರಪಕ್ಷದವರಿಗೆ ಹೊಸ ಶತ್ರು

ಆಸ್ಟ್ರಾಮಿನಲ್ಲಿ ಮಿತ್ರಮಂಡಲಿಗೆ ಹೊಸ ಶತ್ರುವು ಉದ್ಭವವಾ ದೆ ಇದು ಸೊಳ್ಳೆ. ಸೈನಿಕರೆಲ್ಲರಿಗೂ ಒಂದು ಡಬ್ಬದಲ್ಲಿ ಸುಲಾಮನ್ನು ಹಾಕಿ ಕೊಟ್ಟಿರುವರು. ಸಾಯಂಕಾಲ ಸೂರ್ಯಾಸ್ತವಕ್ಕೆ ಅರ್ಧ ಗಂಟೆ ಮುಂಚೆ ಸೈನಿಕರೆಲ್ಲಾ ಒಬ್ಬಬ್ಬರೂ ಡಬ್ಬಿ ತೆಗೆದು ಹಿಡಿದುಕೊಳ್ಳುವರು. ಸೇನಾಧಿಪತಿಯು ಆಜ್ಞೆ ನೀಡಿದ ಕೂಡಲೇ ಡಬ್ಬಿಯನ್ನು ತೆಗೆದು ಹಿಡಿದುಕೊಳ್ಳುವರು. ನಂತರ ಒಂದೊಂದು ಆಜ್ಞೆಯಾದಂತೆಲ್ಲಾ ಮುಖಕ್ಕೆ, ಕೊರಳಿಗೆ ಪಾದಗಳಿಗೆ. ಹೀಗೆ ಎಲ್ಲಾ ಕಡೆ ಒಳೆದುಕೊಳ್ಳುತ್ತಾರೆ ಎಲ್ಲಾ ರಕ್ಕೊಂದು ದಿವಸ ಸೊಳ್ಳೆ ಮೊಟ್ಟೆ ಇಡುವ ಸ್ಥಳ, ಹಳ್ಳಕೊಳ್ಳಗಳಲ್ಲಿರುವ ಸೊಳ್ಳೆಗಳು ಇವನ್ನೆಲ್ಲಾ ನಿರ್ನಾಮ ಮಾಡುವರು.

ವರ್ತಮಾನ

ಚೈನಾ ಅಮೆರಿಕಾ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರಲ್ ರಿಲೇಷನ್ಸ್ 47 ನೇ ವರ್ಧಂತಿಯಲ್ಲಿ ಡಾ|| ಕಿಸ್ಟೆಷಾರವರು ಫೆಸಿಫಿಕ್ ರಣಾಂಗವು ಬಲವಾಗಬೇಕಾದರೆ ಇಂಡಿಯಾಕ್ಕೆ ಬೇಗ ಸ್ವಾತಂತ್ರ್ಯಕೊಡಬೇಕೆಂದರು. ಅಲ್ಲದೆ ಈಗ ಅಮೆರಿಕಾದವರ ಚೀನೀಯರಿಗೆ ಅಮೆರಿಕಾದಲ್ಲಿ ಮಾಡಿರುವ ಅನೇಕ ಸಿರ್ಫಾರಸುಗಳನ್ನು ತೆಗೆದು ಹಾಕಬೇಕೆಂದರು.

ಗ್ರಾಮ ಸ್ವರಾಜ್ಯ ಪದ್ಧತಿಯು ನೆಲೆಗೊಳ್ಳದೆ ಭಾರತ ದೇಶದಲ್ಲಿ ಪ್ರಜಾ ಸಾಮ್ಯ ಪ್ರಭುತ್ವವು ರಾಯಲ್ ಸೊಸೈಟಿಯಲ್ಲಿ ಸರ್ ಪಾಲ್‌ಕೋಂ ಡಾಲ್ರಿಂಗರವರು 2—4—43 ರಲ್ಲಿ ಲಂಡನ್ನಿನಲ್ಲಿ ತಿಳಿಸಿದರು. ಸರ್ ಪಾಲ್‌ಕೋಲಂರವರು ಹಿಂದೆ ಪಂಜಾಬಿನಲ್ಲಿ ಫೈನಾನ್ಸಿಯಲ್ ಕಮಿಷನರಾಗಿದ್ದರು.

ಹಿಂದೂಪುರದ ಸಮೀಪದಲ್ಲಿರುವ ಕಿಮ್ಮಗಾನಪಲ್ಲೆ ಎಂಬ ಗ್ರಾಮದಲ್ಲಿ ಒಬ್ಬ ಹರಿಜನ ಸ್ತ್ರೀಯು ಸುಮಾರು 3 ದಿನಗಳು ಆಹಾರವಿಲ್ಲದೆ ಕ್ಷುದ್ಬಾಧೆಯಿಂದ ಮರಣಹೊಂದಿದಳು. ಅಕೆಗೆ ಗಂಡಸಿರಲಿಲ್ಲ. ಇಂತಹ ದುರ್ಘಟನೆಗಳು ಎಷ್ಟೋ ಕಡೆ ನಡೆಯುತ್ತಿರಬಹುದಲ್ಲವೆ.

ಸೋವಿಯಟ್ ಸೈನ್ಯಗಳ ಹಿಂಬದಿಯಲ್ಲಿ ರಸ್ತೆಗಳೂ ರೈಲುದಾರಿಗಳೂ ವಾಯು ವೇಗ ಮನೋವೇಗಗಳಿಲ್ಲಿ ಪುನರ್ನಿರ್ಮಾಣವಾಗುತ್ತಲಿವೆ. ಜರ್ಮನರಿಗೆ ಸರಿಯಾದ ಬುದ್ಧಿಕಲಿಸಲು ಈಯತ್ನಗಳು ನಡೆಯುತ್ತಿವೆ.

1—4—43 ರಿಂದ ಜನರಿಗೆ ಮಾರಲಿಕ್ಕಾಗಿ ರಾಷ್ಟ್ರ ಸರ್ಕಾರದವರಿಗೆ 145000 ಪೌಂಡುಗಳ ಕ್ವಿನೈನು ಸಪ್ಲೈ ಮಾಡಲ್ಪಟ್ಟಿದೆ.

ಜನತೆಯು ಯುದ್ಧ ಕಾಲದಲ್ಲಿ ಅಸಕ್ತರಾಗಲೆಂದ ವೇಲ್ಸಿಂಕ್ಕೆ ಹಾಕಲಿಕ್ಕೆ ನಮ್ಮ ಚಕ್ರವರ್ತಿಗಳಾದ ಅರಸೇ ಜಾರ್ಜ್ ಪ್ರಭುಗಳು ತಮಗೆ ಪುಸ್ತಳವಾದ ಕೆಲಸಸಿದ್ದರೂ ವಾರಕ್ಕೆರಡು ಸಾರಿ ಒಂದು ಮಾನ ನಿರ್ಮಾಣ ಕಾರ್ಯಾಲಯದಲ್ಲಿ ೩|| ತಾಸು ಕೈಕೆಲಸ ಮಾಡುವ ಕಾರ್ಯಕ್ರಮವನ್ನು ಕೈಗೊಂಡಿರುವರು.

ಅಮೆರಿಕಾಕ್ಕೆ 1500 ಮಿಲಿಯನ್ ಪೌಂಡುಗಳನ್ನು ಕೊಟ್ಟಿದೆ. ರಷ್ಯಾಕ್ಕೆ ಒದಗಿಸಿದಸಾಮಾನಿನ ಮೊತ್ತ 170 ಮಿಲಿಯನ್ ಪೌಂಡು 1940 ರಲ್ಲಿ ಅಂಗ್ಲೇಯರು ಪ್ರತಿದಿನವೂ 5 ಮಿಲಿಯನ್ ಪೌಂಡು ಖರ್ಚು ಮಾಡುತ್ತಿದ್ದರು.

ಆಸ್ಟ್ರೇಲಿಯನ್ ಭೂ ಸೈನ್ಯದ ಕಮ್ಯಾಂಡರ್-ಇನ್-ಛೀಫರಾದ ಜನರಲ್ ಬ್ಲೇಯಿಯವರು ಜಪಾನೀಯರ ಆಸ್ಟ್ರೇಲಿಯಾಕ್ಕೆ ಉತ್ತರದಲ್ಲಿ ಎರಡು ಲಕ್ಷ ಸೈನ್ಯವನ್ನೂ ಹೇರಳವಾದ ವಿಮಾನಗಳನ್ನು ಶೇಖರಮಾಡಿಕೊಂಡಿರುವರು. ಯಾವಾಗಬೇಕಾದರೂ ಬೀಳಬಹುದು ಎಂದು ವರ್ತಮಾನ ಪತ್ರಿಕೆಯ ಸುದ್ದಿಗಾರರಿಗೆ ಹೇಳಿದರಂತೆ.

ಭೂಪಾಲನಲ್ಲಿ ನ್ಯಾಷನಲ್ ವಾರ್ ಫ್ರಂಟ್ ಸ್ಥಾಪನೆಯಾಗಿ ಒಂದು ವರ್ಷವಾಯಿತು. ಈಗಾಗಲೇ 1 ಲಕ್ಷಕ್ಕಿಂತ ಹೆಚ್ಚು ಮೆಂಬರಿರುವರು.

ಮುಂಬಯಿ ಹೈ ಕೋರ್ಟಿಗೆ ಸೀನಿಯರ್ ಜಡ್ಜಿಯಿದ್ದರೂ ಒಬ್ಬ ಆಂಗ್ಲೇಯ ಬ್ಯಾರಿಸ್ಟರ್‌ಗೆ ಛೀಫ್ ಜಡ್ಜಿ ಕೆಲಸ ಕೊಟ್ಟರೆಂದು ಮುಂಬಯಿ ವಕೀಲರು ಸಭೆ ಕೂಡಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು.

ಕಳೆದ ಮೂರು ವರ್ಷಗಳಿಂದಲೂ ಇಂಡಿಯಾ ಮಂತ್ರಿಗಳಾದ ಮಿ|| ಅಮೆರಿಯವರು ಪಾರ್ಲಿಮೆಂಟ್ ಸಭೆಯಲ್ಲಿ ಭಾಷಣ ಮಾಡುವಾಗ್ಗೆ ಹೇಳಿದ್ದನ್ನೇ ಹೇಳುತ್ತಾ ಒಂದಿರುವುದರಿಂದ ಈ ಕಾಗದದ ಕೊರತೆಯಲ್ಲಿ ಆ ಭಾಷಣಗಳನ್ನೆಲ್ಲ ಪಾರ್ಲಿಮೆಂಟ್ ರಿಪೋರ್ಟ್‌ಗಳಲ್ಲಿ ಮುದ್ರಿಸುವುದು ಆವಶ್ಯಕವೇ ? ಎಂದು ಡೈಲಿ ಹೆರಾಲ್ಡ್ ಪತ್ರಿಕೆಯು ಕೇಳಿರುತ್ತದೆ.

ಕೆನಡಾದಲ್ಲಿ ಸದ್ಯದಲ್ಲಿ ಸೇರುವ ಪಾರ್ಲಿಮೆಂಟಿನಲ್ಲಿ ಒಂದು ಸಾವಿರ ಮಿಲಿಯನ್ ಡಾಲರು ಮಿತ್ರ ಪಕ್ಷದವರಿಗೆ ಧರ್ಮವಾಗಿ ಕೆನಡಾದಲ್ಲಿ ತಯಾರಾಗುವ ವಸ್ತುಗಳ ರೂಪದಲ್ಲೇ ಕೊಡಬೇಕೆಂದು ಸರ್ಕಾರದವರು ಒಂದು ಠರಾವನ್ನು ತಂದಿರುವರು.

ಅಮೆರಿಕಾಕ್ಕೂ. ರಷ್ಯಾಕ್ಕೂ ಚೈನಾ ಟೀಯನ್ನು ವಿಶೇಷವಾ ಕಳುಹಿಸುವುದೆಂದು ಚೈನಾ ಸರ್ಕಾರದವರು ಹೇಳಿರುವರು.

ಯರವಾಡ ಹೆಂಗಸರ ಜೈಲಿನಲ್ಲಿ ಮಿತಿಮೀರಿದಷ್ಟು ಕೈದಿಗಳನ್ನು ಸೇರಿಸಿರುತ್ತಾರೆಂದು ವರ್ತಮಾನ ಪತ್ರಿಕೆಗಳಲ್ಲಿ ಬರೆದ ಸಂಗತಿ ನಿರಾಧಾರವಾದುದೆಂದು ಸರ್ಕಾರವವರು ಪ್ರಕಟಣೆ ಹೊರಡಿಸಿರುತ್ತಾರೆ.

ಅಕ್ಸಿಸವರ ಯದ್ಧದಲ್ಲಿ ಕೈದಿಗಳಾಗಿ ಅಂಗಹೀನರಾಗಿಬಿವರನ್ನು ಇಷ್ಟೇ ಮಂದಿ ಮಿತ್ರ ಪಕ್ಷದವರಲ್ಲಿರುವವರನ್ನು ತುರ್ಕಿಯು ಒಂದು ರೇವಿನಲ್ಲಿ ಇದೇ ತಿಂಗಳ 17 ರಲ್ಲಿ ಒಬ್ಬರಿಗೊಬ್ಬರು ಬದಲಾಯಿಸಿಕೊಳ್ಳುವರು.

ಶ್ರೀ ಸ್ವಭಾನು ನಾಮ ಸಂವತ್ಸರದ ಫಲ.

ಸಂವತ್ಸರ ಫಲ— ಮಳೆಯು ಚೆನ್ನಾಗಿ ವರ್ಷಿಸಿ, ಬೆಳೆಗಳು ಚೆನ್ನಾಗಿ ಬೆಳೆಯುವವು. ಆದರೆ ದೇಶೋಪದ್ರವಗಳು ಕಡಮೆಯಾಗುವುದಿಲ್ಲ. ಪ್ರಜೆಗಳಿಗೆ ಸುಖವಿರುವುದಿಲ್ಲ, ವರ್ಷಲಗ್ನವು ಮಕರವಾಗಿ, ಭಾಗ್ಯಾಧಿಪತಿಯು ನೀಚನಾಗಿ, ತೃತೀಯ ಷಷ್ಠಾಧಿಪತಿಗಳಿಗೆ ಸರಿವರ್ತನವುಂಟಾಗಿರುವುದರಿಂದ ಪ್ರಜೆಗಳು ಆಹಾರಪದಾರ್ಥಗಳಿಲ್ಲದೆ ಬಾಡಿಹೋಗುತ್ತಾ ರೋಗಾದಿಗಳಿಂದ ಬಾಧೆಯನ್ನು ಹೊಂದುವರು. ಯುದ್ಧಭಯವಿದ್ದರೂ ಪ್ರಭುಗಳಿಗೆ ವಿಜಯವು ಲಭಿಸುತ್ತಿರುತ್ತವೆ.

ಅಹ್ಲಾದ ಹಾಗೂ ತನುವು ಇವುಗಳೇ ತಾನಾಗಿರುವ ಚಂದ್ರನು ರಾಜನಾಗಿರುವುದರಿಂದ ದೇಶಕ್ಕೆ ಕ್ಷೇಮಾಭ್ಯುದಯವೂ ಸ್ವಾತಂತ್ರ್ಯ ಲಾಭವೂ ಸೂಚಿಸಲ್ಪಟ್ಟಿದೆ. ಕುಜನು ಸೇನಾಧಿಪತಿಯಾಗಿರುವುದರಿಂದ ಅಗ್ನಿಭಯವೂ ಯುದ್ಧಭಯವೂ ವ್ಯಾಪ್ತವಾಗುವನೆಂದು ಹೇಳಬೇಕಾಗುತ್ತದೆ. ಅಂಗಾರಕನೇ ಅರ್ಘಾಧಿಪತಿಯಾಗಿರುವ ಕಾರಣ ಆಹಾರ ಪದಾರ್ಥಗಳಿಗೂ ಬೆಲೆಯು ಮಿತಿಮೀರಿ ಹೆಚ್ಚುವುದು.

ಗ್ರಹಕೂಟಗಳು— ತ್ರಿಗ್ರಹ, ಪಂಚಗ್ರಹ ಕೂಟಗಳು ಹೆಚ್ಚಾಗಿರುವದರಿಂದ ಲೋಕಾರಿಷ್ಟಗಳೂ, ರಾಷ್ಟ್ರನಾಶವೂ, ಯುದ್ಧಭೀತಿಯೂ ಕಂಡುಬರುತ್ತವೆ.

ನವನಾಯಕರು— ರಾಜರೂ, ಮಂತ್ರಿಗಳೂ ಪರಸ್ಪರ ಸ್ನೇಹದೊಂದಿಗೆ ವರ್ತಿಸುವರು, ಬೆಳೆಗಳು ಚೆನ್ನಾಗಿ ಬೆಳೆಯುವವು. ಪದಾರ್ಥಗಳ ಬೆಲೆಯು ಹೆಚ್ಚುವದು. ವ್ಯಾಪಾರಸ್ಥರು ತಲೆಕೆಳಗಾಗುವರು. ಪಶುಗಳಿಗೆ ರೋಗಾದ್ಯುಪದ್ರವಗಳ ಭೀತಿಯುಂಟು. ಹಿತ್ತಿ, ಬೆಳ್ಳಿ, ಬಂಗಾರಗಳಿಗೆ ಬೆಲೆ ಹೆಚ್ಚುವುದು.

ಗ್ರಹಣ— 18—8—43 ನೇ ದಿನ ಚಂದ್ರಗ್ರಹಣ ಬರುತ್ತದೆ.

ದುರ್ಭಿಕ್ಷಗಳು— ಬೃಹಸ್ಪತಿಗೆ ರಾಶಿತ್ರಯ ಸಂಚಾರವಿರುವದರಿಂದ ಪ್ರಜಾಕ್ಷಯವು ಹೆಚ್ಚು, ಕಾಲಸರ್ಪಯೋಗವು ರಾಜಾರಿಷ್ಟ ಸಸ್ಯನಾಶಗಳನ್ನು ಸೂಚಿಸುತ್ತದೆ. ಗುರು ಚಂಡಾಲಯೋಗದಿಂದ ದೇಶಕ್ಕೋಭೆಯೂ ಮಹಾಭಯವೂ ಹೇಳಲ್ಪಟ್ಟಿದೆ. ಶನಿಗೆ ತೃತೀಯದಲ್ಲಿ ಗುರುವು ಇರುವುದರಿಂದ ಕೋಟಿ ಶವಗಳು ಬೀಳುವುವು. ಗುರುವು ಅತಿಚಾರಗತನಾಗಿ, ಶನಿಯು ವಕ್ರಿಸಿರುವುದರಿಂದ ದುರ್ಭಿಕ್ಷ ಹಾಹಾಕಾರಗಳು ಸಂಭವಿಸುವವು. ಕಾರ್ತೀಕ ಮಾಸವು ಜಗತ್ಸಂಹಾರಕಾರಕವಾಗುವುದೋ ಏನೋ ಎಂಬ ಸಂಶಯವು ಕಾಣಬರುತ್ತದೆ.

ಒಟ್ಟಿನಲ್ಲಿ ಹಿಂದಿನ ವರ್ಷಕ್ಕಿಂತ ಈ ವರ್ಷ ಬೆಳೆ ಚೆನ್ನಾಗಿ ಬೆಳೆಯುತ್ತದೆ. ಬೆಲೆಗಳು ತಗ್ಗುವುದಿಲ್ಲ. ಒಂದು ಬಗೆಯ ಶಾಂತಿಯು ಜನರಲ್ಲಿ ಉದ್ಭವಿಸುತ್ತೆ.

ಓಂ ಶಾಂತಿಃ ಶಾಂತಿಃ ಶಾಂತಿಃ

ಜರ್ಮನಿಯ ಸಾಲ ಏರುತಿದೆ

ಜರ್ಮನಿಯ ಸಾಲವು ಹಿಟ್ಲರ್ ಕೆಲಸಕ್ಕೆ ಬಂದಾಗ 590 ಮಿಲಿಯನ್ ಪೌಂಡು ಇದ್ದಿತು. ಇವನು ಕೆಲಸಕ್ಕೆ ಬಂದ ಒಂದು ವರ್ಷಕ್ಕೆ 900 ಮಿಲಿಯನ್ ಪೌಂಡಿಗೆ ಏರಿತು. 1940 ರಲ್ಲಿ 1000 ಮಿಲಿಯನ್ನಾಯಿತು 1941 ರಲ್ಲಿ 2500 ಮಿಲಿಯನ್ನಾಯಿತು. ಈಗ 9300 ಮಿಲಿಯನ್ ಪೌಂಡಿಗೆ ಬಂದಿದೆ.

ಕಾಲರಾ ಪ್ರದೇಶಗಳಿಂದ ಯಾತ್ರಾದಿಗಳು ಬರುವುದರಿಂದ ಯಳಂದೂರಿನಲ್ಲಿ ಉಪದ್ರವವು ಹರಡಬಹುದೆಂದು ಈ ತಿಂಗಳು 2 ರಲ್ಲಿ ಬಿಳಿಗಿರಿರಂಗ ಬೆಟ್ಟದಲ್ಲಿ ನಡೆಯುವ ದೊಡ್ಡ ಜಾತ್ರೆಗೆ ಯಾರನ್ನೂ ಸೇರಿಸುವುದಿಲ್ಲ.

ಹಿಟ್ಲರೂ ರೋಂ ನಿವಾಸಿ ಪಂತ್ರಿಯೂ ಒಟ್ಟುಗೂಡಿ ಎರಡು ದಿವಸ ಮಾತುಕತೆ ನಡೆಸಿದರು. ಏನರ ಪ್ರಯೋಜನ

ದೇಶಾಭಿಮಾನ ಸ್ವಾಭಿಮಾನ

ಇವುಗಳೆರಡರ ದೃಷ್ಟ್ಯಾಯಿಂದಲೂ ವೈಸೂರಿನವರಿಗೆ ಜೀವವಿಮೆ ಮಾಡಲು

ಮೈಸೂರು ಸರ್ಕಾರದ ಜೀವವಿಮೆ ಇಲಾಖೆಯ

ಪ್ರಜೆಗಳ ಶಾಖೆಯೇ ಅತ್ಯುತ್ತಮ ಸಂಸ್ಥೆ!

ವಿಮೆಯ ಮೊಬಲಗಿಗೆ ಸರ್ಕಾರದ ಹುಟ್ಟುವಳಿಯೇ ಆಧಾರ
ವಿಮೆಯಹಣವನ್ನು ಸ್ವಲ್ಪವೂ ಸಾವಕಾಶವಿಲ್ಲದೆ ಸಾವತಿಮಾಡಲಾಗುವದ
ವಿಮೆದಾರರಿಗೆ ಆಡಳಿತ ಸಮಯದಲ್ಲಿ ಪ್ರಾತಿನಿಧ್ಯವುಂಟು
ಸಾವಿರಕ್ಕೆ ಸಾಲಿಯಾನಾ ಇಪ್ಪತ್ತು ರೂ. ಗಳಂತೆ ಬೋನಸ್ ಹಂಚಿದೆ

ಹೆಚ್ಚು ವಿವರಗಳಿಗೆ ದಯವಿಟ್ಟು ಬರೆಯಿರಿ—

ಸೆಕ್ರೆಟರಿ,
ಮೈಸೂರು ಸರ್ಕಾರದ ಜೀವವಿಮೆ ಇಲಾಖೆ
ಬೆಂಗಳೂರು.

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್ ತಯಾರಿಕೆ

ವಾಣಿ ಅಥವಾ VIOLINIST

ಎಂಬ ಕನ್ನಡ ಸಾಮಾಜಿಕ ಚಿತ್ರ

ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ

ಸಂಗೀತರತ್ನ ಟಿ. ಚೌಡಯ್ಯ, ಕಲ್ಚರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯ, ಗಾಯನಗಾಂಧರ್ವ ಚಂಪೆ ವೈದ್ಯನಾಥ ಭಾಗವತರ್ ಮೃದಂಗವಿದ್ವಾನ್ ಮಣಿ ಕೋಕಿಲಕಂಠ ಬಳ್ಳಾರಿ ಲಲಿತ, ಚಂದ್ರಮ್ಮ, ರತ್ನ, ಪಂಡರೀಬಾಯಿ, ಧನುಷ್ಕೋಟಿ ಎ. ನಾರಾಯಣರಾವ್, ಕೆ. ಎಂ. ಮಹದೇವ್, ಮಾಸ್ಟರ್ ಬಿ. ವಿ. ಕೆ. ಮೂರ್ತಿ ಬಿ. ಎಸ್. ಸುಬ್ಬಯ್ಯ, ಎಂ. ಮಾಧವರಾವ್, ಎ. ಸುಬ್ಬಣ್ಣ, ಎಂ. ಆರ್. ಪಿ. ಸಾರಥಿ ಶ್ರೀಮತಿ ಕೆ. ಆರ್, ಶಾಂತರಾಜಮ್ಮ. ಮುಂತಾದವರು ತಾರಾಗಣದಲ್ಲಿದ್ದಾರೆ.

ನಿರ್ದೇಶಕರು— ಜಿ. ಆರ್. ರಾಮಯ್ಯನವರು
ಸಂಗೀತ ನಿರ್ದೇಶಕರು— ಸಂಗೀತರತ್ನ ಟಿ. ಚೌಡಯ್ಯನವರು
ತಯಾರಿಕೆ— ಸಾಹುಕಾರ್ ಟಿ. ಎಸ್. ಶಿವಬಸವಸ್ವಾಮಿ
ಕಥಾ ಮತ್ತು ದಿಗ್ದರ್ಶಕರು— ಕೆ. ಹಿರಣ್ಣಯ್ಯ ಮತ್ತು ಎಂ. ಎಸ್. ಗೋಪಾಲ್.
ಸ್ಟೂಡಿಯೊ—ಸೆಂಟ್ರಲ್ ಸ್ಟೂಡಿಯೋಸ್ ಲಿಮಿಟೆಡ್, ಕೊಯಂಬತ್ತೂರು.

Meet the India's Greatest Character-Actor
CHANDRAMOHAN
in
ROTI
(Hindi)
At —— Ranjit
From 16—4—43
Daily 3 Shows
ಚಂದ್ರಮೋಹನ್ ಪಾತ್ರವಹಿಸಿರುವ
ರೊಟಿ
(ಹಿಂದಿ)
ರಣಜಿತ್‌ನಲ್ಲಿ
16—4—43 ರಿಂದ
ಪ್ರತಿ ದಿನ 3 ಆಟಗಳು

ಪಿ. ಮಂಜಪ್ಪ ಪರ್ಚೆಂಟ್
ಮಂಗಳೂರು ಗಣಪತಿ, ಸುವರ್ಣಾ ಗಜಾನನ ಬೀಡಿಗಳನ್ನೆ ಉಪಯೋಗಿಸಿ
ಹಳೇ ಅಗ್ರಹಾರ, ಮೈಸೂರು.

For good printing
Saraswati Printing Press
Lansdowne Buildings, Mysore
Lakshminarasimha Press
Srirampet, Mysore

ಶ್ರೀ 'ಓಂ' ಬ್ರಾಂಡ್ ಕೇಸರಿ

ಈ "ಓಂ" ಗುರ್ತಿನ ಕೇಸರಿಯು ಅತ್ಯಂತ ಪರಿಶುದ್ಧವಾದುದು. ಇದರಲ್ಲಿ ಯಾವ ಅಕ್ಷೇಪಣಕರವಾದ ಪದಾರ್ಥವೂ ಸೇರಿಲ್ಲ; ಮತ್ತು ಶಾಸ್ತ್ರೀಯವಾಗಿ ಪರಿಶುದ್ಧವಾದುದು. ದೇವಸ್ಥಾನಗಳಲ್ಲಿಯೂ ದೇವರ ಪೂಜೆಗೂ, ಔಷಧಿಗಳಿಗೂ ತಿಂಡಿ ಪದಾರ್ಥಗಳಿಗೂ ಸುಖ ಸಂತೋಷಕಾಲದಲ್ಲೂ ಉಪಯೋಗಿಸಲ್ಪಡಲು ಅರ್ಹವಾಗಿದೆ.

ಅತ್ಯಂತ ಪರಿಶುದ್ಧವಾದುದೆಂದು ಗ್ಯಾರಂಟಿ ಹೊಂದಿದೆ.

ವಲ್ಲಭದಾಸ್ ತೇಜಪಾಲ್
೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಜಿ. ಟಿ. ಮದರಾಸು

Modern Theatres'
MANONMANI

ಮಾಡರನ್ ಥಿಯೇಟರ್ಸ್‌ರವರ "ಮನೋನ್ಮಣಿ"

ಮಾಯಾವರಂ ಸುಂದರಂ ಟಾಕೀಸ್ 13 ನೇ ವಾರ
ಪೊಳ್ಳಾಚಿ ಚೆಲ್ಲಂ ,, 6 ,,
ಪಾಲ್ಘಾಟ್ ನ್ಯೂ ಥಿಯೇಟರ್ 5 ,,
ಈರೋಡ್ ತಿರುಮುರುಗ್ 4 ,,
ತ್ರಿವೇಂಡ್ರಂ ನ್ಯೂ ಥಿಯೇಟರ್ 4 ,,
ಮೈಸೂರು ನ್ಯೂ ಅಪೆರಾ 3 ,,
ಮತ್ತಿತರ ಕಡೆಗಳಲ್ಲಿ

ಆಂಧ್ರಾದಲ್ಲಿ ನನ್ನ ಏಜೆಂಟರು—
ಚಾಂಟಿಯಾ ಟಾಕಿ ಡಿಸ್ಟ್ರಿಬ್ಯೂಟರ್ಸ್, ಬೆಜವಾಡ

ಯಶಸ್ವಿಯಾದ
24 ನೇ ವಾರ
ಸರಸ್ವತಿ ಟಾಕೀಸ್ .... ಮದ್ರಾಸು
ಸೆಂಟ್ರಲ್ ಸಿನಿಮಾ, ... ಮಧುರ

— ಹೆಚ್ಚು ವಿವರಗಳಿಗೆ —
ದಿ ಮಾಡರ್ನ್ ಥಿಯೇಟರ್ಸ್
ಸೇಲಂ — ಮಧುರ

ಮೈಸೂರು ವೈಶ್ಯ ಪತ್ರಿಕೆ
ಈ ಉತ್ತಮ ಸಚಿತ್ರ ಕನ್ನಡ-ತೆಲಗು
ಮಾಸಪತ್ರಿಕೆಗೆ
ಚಂದಾದಾರರಾಗಿರಿ
ವಾರ್ಷಿಕ ಚಂದಾ ರೂ. 2-4-0
ಬಿಡಿ ಪ್ರತಿ 4 ಆಣೆ.
ಕಾರ್ಯಾಲಯ;
ಶ್ರೀ ವಾಸವಾಂಬ ಛತ್ರ
ಅಶೋಕ ಸ್ಟೇ — ಮೈಸೂರು

Edited, Printed & published by M. S. Krishna Rao, at the Satyavadi Press. Chamaraja Agrahar, Mysore.